ಪಿರಿಯಾಪಟ್ಟಣ ತಾಲ್ಲೂಕಿನ ನೀರಾವರಿ ಯೋಜನೆ.

148 (315)

ಶ್ರೀ ಬಸವರಾಜು.ಹೆಚ್.ಸಿ (ಪಿರಿಯಾಪಟ್ಟಣ): ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಪರಿಯಾಪಟ್ಟಣ ತಾ।-ನ ಪಿರಿಯಾಪಟ್ಟಣ (ಕರಡಿ ಲಕ್ಕನಕೆರೆ) ಏತ ನೀರಾವರಿ ಯೋಜನೆ ಪ್ರಾರಂಭಿಸಿದ್ದು ಎಂದಿನಿಂದ?

ಆ. ಈ ಯೋಜನೆಯ ಪ್ರಗತಿ ಯಾವ ಹಂತದಲ್ಲಿದೆ?

ಇ. ಈ ಯೋಜನೆ ತಗಲುವ ಒಟ್ಟು ವೆಚ್ಚ ಎಷ್ಟು; ಪ್ರಸ್ತುತ ಸಾಲಿನವರೆಗೆ ವರ್ಷವಾರು ಬಿಡುಗಡೆ ಮಾಡಲಾಗಿರುವ ಹಣ ಎಷ್ಟು?

ಈ. ಯೋಜನೆಯನ್ನು ಪೂರ್ಣಗೊಳಿಸಲಿಕ್ಕೆ ಬೇಕಾಗುವ ಕಾಲಾವಧಿ ಎಷ್ಟು?

ಶ್ರೀ ಹೆಚ್.ಕೆ.ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು):

ಅ. ದಿನಾಂಕ 13-6-92 ರಂದು ಪ್ರಾರಂಭಿಸಲಾಯಿತು.

ಆ. ಹೆಡ್‌ವರ್ಕ್ಸ್ ಟೆಂಡರ್ ಮೊತ್ತ ರೂ. 1683 ಲಕ್ಷಗಳು. ಈವರೆಗೆ ಸಾಧಿಸಿರುವ ಪ್ರಗತಿ ರೂ. 1234.40 ಲಕ್ಷ. ಪಿರಿಯಾಪಟ್ಟಣ ಏತ ನೀರಾವರಿ ಯೋಜನೆಯ ಮುಖ್ಯ ನಾಲೆಯ 0-24 ಕಿ.ಮೀ.ವರೆಗೆ ಕೆಲಸಗಳು ಲೈನಿಂಗ್ ಹೊರತುಪಡಿಸಿ ಬಹುತೇಕ ಪೂರ್ಣಗೊಂಡಿವೆ. 1,2,3 ಮತ್ತು 6ನೇ ಕಿ.ಮೀ.ನ ಉಳಿಕೆ ಕೆಲಸಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. 0-24 ಕಿ.ಮೀ.ನಲ್ಲಿ ಬರುವ ವಿತರಣಾ ನಾಲೆಗಳ ಕೆಲಸಗಳು ಪ್ರಗತಿಯಲ್ಲಿವೆ. 25ನೇ ಕಿ.ಮೀ.ನಲ್ಲಿ ಬರುವ ಬೆಟ್ಟದಪುರ ಮೇಲ್ಗಾಲುವೆಯ ಕಾಮಗಾರಿಯ ಅಂದಾಜು ಹಾಗೂ ಗುತ್ತಿಗೆದಾರರ ಪೂರ್ವಾರ್ಹತೆ ಟೆಂಡರ್ ಮಂಜೂರಾತಿ ಹಂತದಲ್ಲಿದೆ.

ಇ. ಹಾರಂಗಿ ಯೋಜನೆಯ ರೂ.230 ಕೋಟಿಗಳ ಅನುಮೋದಿತ ಯೋಜನೆ ಅಡಿಯಲ್ಲಿ ಈ ಏತ ನೀರಾವರಿ ಯೋಜನೆಗೆ ರೂ 63.25 ಕೋಟಿಗಳನ್ನು ನಿಗಧಿಪಡಿಸಲಾಗಿದೆ. ಈ ಯೋಜನೆಯ ಅಂದಾಜು ವೆಚ್ಚ 1999-2000 ಸಾಲು ದರಸೂಚಿಯಂತೆ ಒಟ್ಟು ರೂ. 103 ಕೋಟಿ (ಪರಿಷ್ಕೃತ).

ಈ ಯೋಜನೆಗೆ ವರ್ಷವಾರು ಬಿಡುಗಡೆ ಮಾಡಲಾಗಿರುವ ಹಣದ ವಿವರ

ಕೆಳಕಂಡಂತಿದೆ. (ಫೆಬ್ರವರಿ 2000ದ ಅಂತ್ಯದವರೆಗೆ)

ವರ್ಷ	ಬಿಡುಗಡೆ ಮಾಡಿದ ಹಣದ ಮೊತ್ತ
1993-94	ರೂ. 86.99 ಲಕ್ಷ
1994-95	ರೂ. 134.00 ಲಕ್ಷ
1995-96	ರೂ. 462.65 ಲಕ್ಷ
1996-97	ರೂ. 133.55 ಲಕ್ಷ
1997-98	ರೂ. 448.37 ಲಕ್ಷ
1998-99	ರೂ. 1351.90 ಲಕ್ಷ
1999-2000	ರೂ. 572.66 ಲಕ್ಷ
ಒಟ್ಟು	ರೂ. 3190. 12 ಲಕ್ಷ

ಈ. ಈ ಯೋಜನೆಯನ್ನು ಜೂನ್ 2002ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ವಿದ್ಯುತ್ ಅಭಾವ.

149 (306)

ಶ್ರೀ ಹೆಚ್.ಸಿ.ಬಸವರಾಜು (ಪಿರಿಯಾಪಟ್ಟಣ): ಮಾನ್ಯ ಇಂಧನ ರಾಜ್ಯ.ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಅಭಾವ ಹಾಗೂ ವೋಲ್ಟೇಜ್ ಸಮಸ್ಯೆ ತೀವ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ತಾಲ್ಲೂಕಿನಲ್ಲಿ ಹಾಲಿ ಇರುವ ಬೆಟ್ಟದಪುರದ ಉಪಕೇಂದ್ರಕ್ಕೆ ಓ.ಎಲ್.ಟಿ.ಸಿ ಅತ್ಯಾವಶ್ಯಕವಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಪಿರಿಯಾಪಟ್ಟಣ ಉಪಕೇಂದ್ರ ಸ್ಥಾಪನೆಗೆ ಮಂಜೂರಾತಿ ನೀಡಲಾಗಿದೆಯೇ?